ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

19

ಇಲಾಖೆ / ವಿಷಯ : DEPARTMENT / SUBJECT: ನಿಧನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 15/12/20

# ಸಾಹಿತಿ ಎ. ಪಂಕಜ ಇನ್ನಿಲ್ಲ

15/12/20

**ಬೆಂಗಳೂರು:** ಅನಾರೋಗ್ಯದಿಂದ ಬಳಲುತ್ತಿದ್ದ ಹಿರಿಯ ಸಾಹಿತಿ ಹಾಗೂ ಸಮಾಜ ಸೇವಕಿ ಎ.ಪಂಕಜ (88) ಅವರು ಇತ್ತೀಚೆಗೆ ನಿಧನರಾದರು. ಇಬ್ಬರು ಪುತ್ರರು, ಐದು ಮಂದಿ ಮೊಮ್ಮಕ್ಕಳನ್ನು ಅಗಲಿದ್ದಾರೆಂದು ಅವರ ಪುತ್ರ ಎ.ಜಯಸಿಂಹ ತಿಳಿಸಿದ್ದಾರೆ.



ಬನ್ನೇರುಘಟ್ಟ ರಸ್ತೆಯ ವಿಜಯ ಬ್ಯಾಂಕ್ ಕಾಲೋನಿಯಲ್ಲಿ ನೆಲೆಸಿದ್ದರು. ಕೆಲವು ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪಂಕಜ ಅವರು 1932 ಏಪ್ರಿಲ್ 20 ರಂದು ತುಮಕೂರು ಜಿಲ್ಲೆ ಪಾವಗಡದಲ್ಲಿ ಜನಿಸಿದ್ದರು. ಸಾಹಿತ್ಯ ಕ್ಷೇತ್ರದ ಒಲವು ಹೊಂದಿದ್ದ ಅವರು ನಾದಭಂಗ ಕಾದಂಬರಿ ಸೇರಿ ಹಲವು ಪತ್ತೇದಾರಿ ಕಾದಂಬರಿಗಳನ್ನು ರಚಿಸಿದ್ದಾರೆ. ವಿಜಯಗೀತ, ಸೊಗಸುಗಾತಿ, ಬಂಗಾರದ ಬಲೆ, ಕಾಗದದ ದೋಣಿ, ಸುಖಸ್ವಪ್ನ ಮುಂತಾದ ಕಾದಂಬರಿಗಳು ಜನಪ್ರಿಯ ಆಗಿವೆ. ಜಾಲಿಮುಳ್ಳು, ನೀಲಿಡೈರಿ, ನೀನಾ ಮುಂತಾದ ಪತ್ತೇದಾರಿ ಕಾದಂಬರಿಗಳು ಸೇರಿ 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮಹಿಳೆಯರಿಗಾಗಿ 'ಮಹಿಳಾ ಕೋ ಆಪರೇಟಿವ್ ಬ್ಯಾಂಕ್' ಸ್ಥಾಪಿಸಿದ ಹೆಗ್ಗಳಿಕೆ ಪಂಕಜ ಅವರದ್ದಾಗಿದೆ.